# ಗಿರೀಶ್ ಕಾರ್ನಾಡರ 'ಯಯಾತಿ' ನಾಟಕದಲ್ಲಿ 'ಸ್ತ್ರೀ'

**ತೇಜಶ್ರೀ ಎಂ.***

**DOI: https://doi.org/10.5281/zenodo.22107048**

**ABSTRACT**

ಗಿರೀಶ್ ಕಾರ್ನಾಡರ 'ಯಯಾತಿ' ನಾಟಕವು ಪೌರಾಣಿಕ ಕಥಾವಸ್ತುವನ್ನು ಆಧರಿಸಿಕೊಂಡಿದ್ದರೂ ಅದರ ಮೂಲಕ ಆಧುನಿಕ ಮಾನವ ಬದುಕಿನ ಸಂಕೀರ್ಣತೆ, ಸಂಬಂಧಗಳ ಸಂಘರ್ಷ, ಅಧಿಕಾರ, ಆಸೆ, ತ್ಯಾಗ ಮತ್ತು ಹೊಣೆಗಾರಿಕೆಯಂತಹ ಹಲವು ಆಯಾಮಗಳನ್ನು ಅನಾವರಣಗೊಳಿಸುತ್ತದೆ. ಈ ನಾಟಕದಲ್ಲಿ ಸ್ತ್ರೀ ಪಾತ್ರಗಳು ಕೇವಲ ಪುರುಷ ಪಾತ್ರಗಳ ಬದುಕಿಗೆ ಪೂರಕವಾಗಿರುವ ಪಾತ್ರಗಳಾಗಿ ಕಾಣಿಸಿಕೊಳ್ಳದೆ, ತಮ್ಮದೇ ಆದ ಭಾವನೆ, ಚಿಂತನೆ, ನಿರ್ಧಾರ ಮತ್ತು ಅಸ್ತಿತ್ವದೊಂದಿಗೆ ರೂಪುಗೊಂಡಿರುವುದು ಗಮನಾರ್ಹವಾಗಿದೆ. ದೇವಯಾನಿ, ಶರ್ಮಿಷ್ಠೆ ಹಾಗೂ ಚಿತ್ರಲೇಖೆಯಂತಹ ಸ್ತ್ರೀ ಪಾತ್ರಗಳ ಮೂಲಕ ಕಾರ್ನಾಡರು ಸ್ತ್ರೀ ಮನಸ್ಸಿನ ವಿವಿಧ ಮುಖಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

ಈ ಸಂಶೋಧನಾ ಲೇಖನದಲ್ಲಿ 'ಯಯಾತಿ' ನಾಟಕದಲ್ಲಿ ಬರುವ ಸ್ತ್ರೀ ಪಾತ್ರಗಳ ಸ್ವರೂಪ, ವ್ಯಕ್ತಿತ್ವ, ಮನೋಭಾವ, ಸಂಬಂಧಗಳಲ್ಲಿನ ಸಂಘರ್ಷ ಹಾಗೂ ಅವರ ನಿರ್ಧಾರಗಳ ಹಿಂದಿರುವ ಸಾಮಾಜಿಕ ಮತ್ತು ವೈಯಕ್ತಿಕ ನೆಲೆಗಳನ್ನು ವಿಶ್ಲೇಷಿಸಲಾಗಿದೆ. ದೇವಯಾನಿಯ ಸ್ವಾಭಿಮಾನ, ಶರ್ಮಿಷ್ಠೆಯ ತ್ಯಾಗ ಮತ್ತು ಅಂತರಂಗದ ನೋವು, ಸ್ವರ್ಣಲತೆಯ ಸಹನೆ, ಚಿತ್ರಲೇಖೆಯ ಪ್ರಶ್ನಿಸುವ ಮನೋಭಾವ ಮುಂತಾದ ವಿಚಾರಗಳನ್ನು ಪ್ರಮುಖವಾಗಿ ಪರಿಶೀಲಿಸಲಾಗಿದೆ. 'ಯಯಾತಿ' ನಾಟಕದ ಸ್ತ್ರೀ ಪಾತ್ರಗಳು ಕೇವಲ ಪೌರಾಣಿಕ ಕಥೆಯ ಅಂಗಗಳಾಗಿರದೆ, ಸ್ತ್ರೀ ಅಸ್ತಿತ್ವ, ಆತ್ಮಗೌರವ, ಆಯ್ಕೆ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳನ್ನು ಪ್ರತಿನಿಧಿಸುವ ಪ್ರಮುಖ ಪಾತ್ರಗಳಾಗಿವೆ ಎಂಬುದನ್ನು ಲೇಖನವು ಪ್ರತಿಪಾದಿಸುತ್ತದೆ.

**KEYWORDS:** ಯಯಾತಿ ನಾಟಕ, ಸ್ತ್ರೀ ಪ್ರಜ್ಞೆ, ಪುರುಷಪ್ರಧಾನ ವ್ಯವಸ್ಥೆ, ಅಸ್ತಿತ್ವದ ಸಂಘರ್ಷ, ಗಿರೀಶ್ ಕಾರ್ನಾಡ್.

* **ತೇಜಶ್ರೀ ಎಂ.,** ಉಪನ್ಯಾಸಕಿ, ಕನ್ನಡ ವಿಭಾಗ, ಶ್ರೀ ರಾಮಕೃಷ್ಣ ಕಾಲೇಜು, ಮಂಗಳೂರು.

**ಪೀಠಿಕೆ:**

ಗಿರೀಶ್ ಕಾರ್ನಾಡರ ‘ಯಯಾತಿ’ ಮಹಾಭಾರತ ಕಥೆಯನ್ನು ಆಧರಿಸಿದ ನಾಟಕ. ಪುರಾಣದ ಕಥೆಯನ್ನು ಆಧರಿಸಿಕೊಂಡಿದ್ದರೂ, ಅದರ ಮೂಲಕ ಆಧುನಿಕ ಮನುಷ್ಯ ಜೀವನದ ಹಲವು ಸಂಕೀರ್ಣ ಸಮಸ್ಯೆಗಳನ್ನು ಚರ್ಚಿಸುತ್ತದೆ. ಕಾರ್ನಾಡರು ನಾಟಕವನ್ನು ಕೇವಲ ಪೌರಾಣಿಕ ಕಥೆಯಾಗಿ ನಿರೂಪಿಸದೆ, ಸಮಕಾಲೀನ ಬದುಕಿನ ಮೌಲ್ಯಗಳು, ಮಾನವ ಸಂಬಂಧಗಳು, ಸ್ವಾರ್ಥ, ತ್ಯಾಗ, ಜವಾಬ್ದಾರಿ, ಭೋಗಾಸಕ್ತಿ ಮತ್ತು ವ್ಯಕ್ತಿಸ್ವಾತಂತ್ರ್ಯದ ಪ್ರಶ್ನೆಗಳೊಂದಿಗೆ ಜೋಡಿಸಿದ್ದಾರೆ.

ನಾಟಕದ ಕೇಂದ್ರ ಪಾತ್ರವಾದ ಯಯಾತಿಯ ವ್ಯಕ್ತಿತ್ವದಲ್ಲಿ ಅಧಿಕಾರ ಮತ್ತು ಭೋಗದ ಮೇಲಿನ ಅಪಾರ ಆಸಕ್ತಿ ಕಂಡುಬರುತ್ತದೆ. ಶುಕ್ರಾಚಾರ್ಯರು ಯಯಾತಿಗೆ ಅಕಾಲಿಕ ವೃದ್ಧಾಪ್ಯದ ಶಾಪ ನೀಡಿದಾಗ ಯಯಾತಿಗೆ ತನ್ನ ಯೌವನವನ್ನು ಕಳೆದುಕೊಳ್ಳುವುದು ಅಂಗೀಕರಿಸಲಾಗದ ವಿಚಾರವಾಗುತ್ತದೆ. ವೃದ್ಧಾಪ್ಯವನ್ನು ಸ್ವೀಕರಿಸುವ ಬದಲು ತನ್ನ ಆಸೆಗಳನ್ನು ಮುಂದುವರಿಸಿಕೊಳ್ಳಲು ಅವನು ತನ್ನ ಮಗನ ಯೌವನವನ್ನು ಪಡೆಯಲು ಮುಂದಾಗುತ್ತಾನೆ. ಇದರಿಂದ ಅವನ ಸ್ವಾರ್ಥ ಮತ್ತು ಭೋಗಾಸಕ್ತಿಯ ಸ್ವರೂಪ ಸ್ಪಷ್ಟವಾಗುತ್ತದೆ. ಯಯಾತಿಯ ವೈಯಕ್ತಿಕ ಆಸೆಗಳು ಕೇವಲ ಅವನ ಜೀವನವನ್ನಷ್ಟೇ ಅಲ್ಲದೆ, ಅವನ ಸುತ್ತಮುತ್ತ ಇರುವವರ ಬದುಕನ್ನೂ ಪ್ರಭಾವಿಸುತ್ತವೆ. ಹೀಗಾಗಿ ನಾಟಕದಲ್ಲಿ ವ್ಯಕ್ತಿಯ ಸ್ವಾರ್ಥದಿಂದಾಗಿ ಕುಟುಂಬ ಹಾಗೂ ಸಮಾಜದ ಮೇಲೆ ಉಂಟಾಗುವ ಪರಿಣಾಮಗಳನ್ನು ಕಾರ್ನಾಡರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಯಯಾತಿಗೆ ಯೌವನ ದೊರೆತರೂ ಅವನ ಆಸೆಗಳು ಮುಗಿಯುವುದಿಲ್ಲ. ನಾಟಕದ ಕೊನೆಯಲ್ಲಿ ಜೀವನದ ಸತ್ಯವನ್ನು ಅರಿಯುವ ಹಂತಕ್ಕೆ ಯಯಾತಿ ತಲುಪುತ್ತಾನೆ. ಈ ಮೂಲಕ ಕಾರ್ನಾಡರು ಮನುಷ್ಯ ತನ್ನ ಅತೃಪ್ತ ಆಸೆ, ಸ್ವಾರ್ಥ ಮತ್ತು ಭೋಗದ ಹಿಂದೆ ಓಡುವ ಮನೋಭಾವವನ್ನು ವಿಮರ್ಶಿಸುತ್ತಾರೆ.

ನಾಟಕದಲ್ಲಿ ಬರುವ ಸ್ತ್ರೀ ಪಾತ್ರಗಳು ದೇವಯಾನಿ, ಶರ್ಮಿಷ್ಠೆ, ಸ್ವರ್ಣಲತೆ ಹಾಗೂ ಚಿತ್ರಲೇಖೆ. ನಾಲ್ಕು ಪಾತ್ರಗಳೂ ನಾಟಕದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವರ ಬದುಕಿನ ಮೂಲಕ ವಿವಾಹ, ಅಧಿಕಾರ, ಪ್ರೀತಿ, ಅಸೂಯೆ, ಸಾಮಾಜಿಕ ಸ್ಥಾನಮಾನ ಮತ್ತು ಪುರುಷಕೇಂದ್ರಿತ ವ್ಯವಸ್ಥೆಯ ಪರಿಣಾಮಗಳನ್ನು ಕಾಣಬಹುದು. ಯಯಾತಿಯ ವೈಯಕ್ತಿಕ ಬಯಕೆಗಳ ಪರಿಣಾಮವಾಗಿ ದೇವಯಾನಿ, ಶರ್ಮಿಷ್ಠೆ, ಪುರು ಮತ್ತು ಇತರ ಪಾತ್ರಗಳ ಜೀವನದಲ್ಲಿ ಉಂಟಾಗುವ ಸಂಘರ್ಷಗಳು ನಾಟಕಕ್ಕೆ ಆಳವಾದ ಸಾಮಾಜಿಕ ಅರ್ಥವನ್ನು ನೀಡುತ್ತವೆ. ನಾಟಕದಲ್ಲಿ ಸ್ತ್ರೀ ಪಾತ್ರಗಳು ಕಥಾವಸ್ತುವಿನ ಬೆಳವಣಿಗೆಗೆ ಮಾತ್ರವಲ್ಲದೆ, ನಾಟಕದ ವೈಚಾರಿಕತೆಯನ್ನು ರೂಪಿಸುವಲ್ಲಿಯೂ ಮಹತ್ವದ ಪಾತ್ರ ವಹಿಸುತ್ತವೆ. ಸ್ತ್ರೀಯರ ಭಾವನೆ, ಸ್ವಾಭಿಮಾನ, ಪ್ರೀತಿ, ತ್ಯಾಗ, ಅಸ್ತಿತ್ವ ಹಾಗೂ ವೈಯಕ್ತಿಕ ಆಯ್ಕೆಗಳ ವಿವಿಧ ಆಯಾಮಗಳು ನಾಟಕದಲ್ಲಿ ಅನಾವರಣಗೊಳ್ಳುತ್ತವೆ. ಪ್ರತಿಯೊಂದು ಪಾತ್ರವೂ ತನ್ನದೇ ಆದ ಮನೋಭಾವ ಮತ್ತು ಜೀವನಾನುಭವಗಳ ಮೂಲಕ ವಿಭಿನ್ನ ಸ್ತ್ರೀ ಧ್ವನಿಗಳನ್ನು ಪ್ರತಿನಿಧಿಸುತ್ತವೆ.

**ದೇವಯಾನಿ:**

ದೇವಯಾನಿ ಶುಕ್ರಾಚಾರ್ಯರ ಮಗಳು. ಈಕೆ ಹುಟ್ಟಿನಿಂದಲೇ ಹಟವಾದಿ. ದೇವಗುರು ಬೃಹಸ್ಪತಿಯ ಮಗನಾದ ಕಚನು ಕಪಟದಿಂದ ಶುಕ್ರಾಚಾರ್ಯರಿಂದ ಸಂಜೀವಿನಿ ವಿದ್ಯೆ ಕಲಿಯಲು ಬಂದವನು ದೇವಯಾನಿಯ ಸಹಾಯದಿಂದ ವಿದ್ಯೆ ಪಡೆಯುತ್ತಾನೆ. ಆದರೆ ದೇವಯಾನಿ ಆತನಲ್ಲಿ ಪ್ರೇಮ ನಿವೇದನೆ ಮಾಡಿಕೊಂಡಾಗ ಆತ ತಿರಸ್ಕರಿಸುತ್ತಾನೆ. ಇದು

ಆಕೆಯ ಹಟವಾದಿತನವನ್ನು ಇನ್ನಷ್ಟು ಹೆಚ್ಚಿಸುತ್ತದೆ ಹಾಗೂ ಆಕೆಗೆ ಪುರುಷರ ಮೇಲೆ ದ್ವೇಷ ಹುಟ್ಟಲು ಕಾರಣವಾಗುತ್ತದೆ. ದೈತ್ಯರಾಜ ವೃಷಪರ್ವನ ಮಗಳಾದ ಶರ್ಮಿಷ್ಠೆ ದೇವಯಾನಿಯ ಆಪ್ತ ಗೆಳತಿ. ಆಕೆಯೊಂದಿಗೂ ಜಗಳವಾಡಿದ ದೇವಯಾನಿ ಆಪ್ತ ಗೆಳತಿಯನ್ನೇ ತನ್ನ ದಾಸಿಯನ್ನಾಗಿಸುತ್ತಾಳೆ. ತನ್ನ ಬಲಗೈ ಹಿಡಿದ ಎನ್ನುವ ಕಾರಣಕ್ಕೆ ಯಯಾತಿಯನ್ನು ಮದುವೆಯಾದ ದೇವಯಾನಿ ಸಂತೃಪ್ತಿಯ ಬದುಕನ್ನು ಕಾಣುವುದಿಲ್ಲ. ರಾಜಕನ್ಯೆಯಾದ ಶರ್ಮಿಷ್ಠೆಯನ್ನು ದಾಸಿಯಾಗಿಸಿದ ಪಾಪಪ್ರಜ್ಞೆ ಆಕೆಯನ್ನು ಕಾಡುತ್ತಲೇ ಇರುತ್ತದೆ. ಗೆಳತಿಯಾದ ಶರ್ಮಿಷ್ಠೆಯ ಮೇಲಿನ ಪ್ರೀತಿ ಅವಳ ಮನಸ್ಸಿನಲ್ಲಿ ಹಾಗೆಯೇ ಇರುತ್ತದೆ. 'ಶರ್ಮಿಷ್ಠೆಯ ಮಾತೇ ಹಾಗೆ, ಆದರೆ ಅವಳ ಮನಸ್ಸು ಕೆಟ್ಟದ್ದಲ್ಲ' (ಯಯಾತಿ, ಪು.ಸಂ 4) ಎನ್ನುವ ಈ ಮಾತಿನಲ್ಲಿ ಅದು ಸ್ಪಷ್ಟವಾಗುತ್ತದೆ. ಶುಕ್ರಾಚಾರ್ಯರ ಮಗಳಾಗಿರುವುದರಿಂದ ತನ್ನ ಸಾಮಾಜಿಕ ಸ್ಥಾನಮಾನ ಮತ್ತು ತಂದೆಯ ಪ್ರಭಾವದ ಅರಿವನ್ನು ದೇವಯಾನಿ ಹೊಂದಿರುತ್ತಾಳೆ. ಇದು ಆಕೆಯ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ. ಯಯಾತಿಯನ್ನು ಮದುವೆಯಾದ ದೇವಯಾನಿ ತನ್ನ ವೈವಾಹಿಕ ಬದುಕಿನ ಬಗ್ಗೆ ಕೆಲವು ನಿರೀಕ್ಷೆಗಳನ್ನು ಹೊಂದಿರುತ್ತಾಳೆ. ಯಯಾತಿ ತನ್ನನ್ನು ಸ್ವೀಕರಿಸಿರುವುದರಿಂದ ಅವನೊಂದಿಗೆ ಒಂದು ಸ್ಥಿರವಾದ ದಾಂಪತ್ಯ ಜೀವನವನ್ನು ಕಟ್ಟಿಕೊಳ್ಳುವ ಆಶಯ ಆಕೆಯಲ್ಲಿದೆ. ಆದರೆ ಯಯಾತಿಯ ವ್ಯಕ್ತಿತ್ವದಲ್ಲಿರುವ ಭೋಗಾಸಕ್ತಿ ಮತ್ತು ಶರ್ಮಿಷ್ಠೆಯೊಂದಿಗಿನ ಸಂಬಂಧವು ದೇವಯಾನಿಯ ನಿರೀಕ್ಷೆಗಳನ್ನು ಹುಸಿಯಾಗಿಸುತ್ತದೆ. ಇದರಿಂದ ಆಕೆಯ ಮನಸ್ಸಿನಲ್ಲಿ ಅಸಮಾಧಾನ ಮತ್ತು ಸಂಘರ್ಷ ಉಂಟಾಗುತ್ತದೆ. ದಾಸಿಯಾಗಿ ತನ್ನೊಡನೆ ಅರಮನೆಯ ಮೆಟ್ಟಿಲು ಹತ್ತಿದ ಶರ್ಮಿಷ್ಠೆ ಈಗ ತನಗೆ ಸರಿಸಮಾನಳಾಗಿ ನಿಲ್ಲುತ್ತಿರುವುದನ್ನು ಸ್ವೀಕರಿಸಲಾಗದ ಮನಸ್ಥಿತಿ ಆಕೆಯದ್ದಾಗುತ್ತದೆ. ತನಗಾದ ಅನ್ಯಾಯಕ್ಕೆ ಮಂಗಳಸೂತ್ರವನ್ನೇ ಕಡಿದು ಬಿಸಾಡಿದ ದೇವಯಾನಿ ಶುಕ್ರಾಚಾರ್ಯರು ಯಯಾತಿಗೆ ವೃದ್ಧಾಪ್ಯದ ಶಾಪ ನೀಡುವುದಕ್ಕೆ ಕಾರಣಳಾಗುತ್ತಾಳೆ. ದೇವಯಾನಿಗೆ ತನ್ನ ಕುಲದ ಮೇಲೆ ದುರಭಿಮಾನವಿತ್ತು. 'ಏಕೆ ಆರ್ಯ ಸ್ತ್ರೀಯ ಕುಪ್ಪಸ ತೊಟ್ಟೊಡನೆ ಆರ್ಯಸ್ತ್ರೀಯಾಗುವ ಕನಸು ಬಿತ್ತೇ? ಹಸಿದ ನಾಯಿಗೆ ಚಂದ್ರ ರೊಟ್ಟಿಯಾದ ಹಾಗೆ' (ಯಯಾತಿ, ಪು.ಸಂ 14) ಎಂಬ ಮಾತು ಹಾಗೆಯೇ ಕುಲದ ಅಭಿಮಾನದ ಕಾರಣವನ್ನೇ ಹಿಡಿದು ಯಯಾತಿಯ ಅರಮನೆಯನ್ನು ತೊರೆಯುವ ಸಂದರ್ಭ ಇದನ್ನು ಸ್ಪಷ್ಟಪಡಿಸುತ್ತದೆ.

ದೇವಯಾನಿಯ ಪಾತ್ರದ ಪ್ರಮುಖ ಲಕ್ಷಣವೆಂದರೆ ಹಕ್ಕುಪ್ರಜ್ಞೆ. ಯಯಾತಿಯ ಮೇಲೆ ತನ್ನ ಪತ್ನಿಯಾಗಿ ತನಗಿರುವ ಹಕ್ಕನ್ನು ಆಕೆ ಬಲವಾಗಿ ಪ್ರತಿಪಾದಿಸುತ್ತಾಳೆ. ಶರ್ಮಿಷ್ಠೆ ತನ್ನ ಬದುಕಿನಲ್ಲಿ ಪ್ರವೇಶಿಸುವುದನ್ನು ಆಕೆ ಸಹಜವಾಗಿ ಒಪ್ಪಿಕೊಳ್ಳುವುದಿಲ್ಲ. ಇಲ್ಲಿ ದೇವಯಾನಿಯ ಅಸೂಯೆಯನ್ನು ಕೇವಲ ವೈಯಕ್ತಿಕ ದೌರ್ಬಲ್ಯವೆಂದು ಪರಿಗಣಿಸುವುದಕ್ಕಿಂತ ದಾಂಪತ್ಯ ಸಂಬಂಧದಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಳ್ಳುವ ಪ್ರಯತ್ನ ಎಂದು ಪರಿಭಾವಿಸಬಹುದು. ಹೀಗಾಗಿ ದೇವಯಾನಿಯ ಅಸೂಯೆಯು ಪ್ರೀತಿ, ಸ್ವಾಮ್ಯಪ್ರಜ್ಞೆ ಮತ್ತು ದಾಂಪತ್ಯ ಹಕ್ಕಿನ ಸಂಕೀರ್ಣ ಅಭಿವ್ಯಕ್ತಿಯಾಗಿ ಕಾಣಿಸುತ್ತದೆ. ಯಯಾತಿಯೊಂದಿಗೆ ಸಂಬಂಧದಲ್ಲಿ ಉಂಟಾಗುವ ಸಮಸ್ಯೆಗಳನ್ನು ಮೌನವಾಗಿ ಸಹಿಸದೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸುವುದರಿಂದ ದೇವಯಾನಿಯು ನಾಟಕದಲ್ಲಿ ಸಕ್ರಿಯ ಸ್ತ್ರೀ ಪಾತ್ರವಾಗಿ ಕಂಡುಬರುತ್ತಾಳೆ.

**ಶರ್ಮಿಷ್ಠೆ:**

ಶರ್ಮಿಷ್ಠೆ ದೈತ್ಯರಾಜ ವೃಷಪರ್ವನ ಮಗಳು. ಹಾಗೆಯೇ ಶುಕ್ರಾಚಾರ್ಯರ ಮಗಳಾದ ದೇವಯಾನಿಯ ಜೊತೆಗೆ ಸಣ್ಣಂದಿನಿಂದಲೇ ಗೆಳೆತನವನ್ನು ಬೆಳೆಸಿದವಳು. ಆಪ್ತ

ಗೆಳತಿಯಾದ ದೇವಯಾನಿಯ ಪ್ರತಿಯೊಂದು ಆಸೆಗಳನ್ನು ಪೂರೈಸುತ್ತಿದ್ದುದರಿಂದ ಅವರಿಬ್ಬರ ಸ್ನೇಹ ಗಾಢವಾಗಿತ್ತು. ನೀರಿನಲ್ಲಿ ಈಜಾಡಿ ಬಂದು ವಸ್ತ್ರ ಧರಿಸುವಾಗ ಬಟ್ಟೆ ಬದಲಾದ ಕ್ಷುಲ್ಲಕ ಕಾರಣಕ್ಕೆ ಜಗಳವಾಡಿ ಅವರಿಬ್ಬರ ಸ್ನೇಹ ಮುರಿದುಬೀಳುತ್ತದೆ. ಕೋಪದ ಕೈಗೆ ಬುದ್ಧಿಕೊಟ್ಟು ಶರ್ಮಿಷ್ಠೆ ದೇವಯಾನಿಯನ್ನು ಬಾವಿಗೆ ನೂಕಿದ್ದರೂ ಅದೇ ಬಾವಿಯ ಕಟ್ಟೆಯ ಮೇಲೆ ಕುಳಿತು ಅತ್ತ ಶರ್ಮಿಷ್ಠೆಯಲ್ಲಿ ತಾನು ಮಾಡಿದ ಕೃತ್ಯಕ್ಕಾಗಿ ಪಶ್ಚಾತ್ತಾಪವಿತ್ತು. ಕೊನೆಗೆ ಶರ್ಮಿಷ್ಠೆ ತಾನು ಮಾಡಿದ ತಪ್ಪಿಗಾಗಿ ದೇವಯಾನಿಯ ಹಟದಂತೆ ಆಕೆಯ ದಾಸಿಯಾದಾಗ ತನ್ನ ಯೌವನದ ಬಾಳ್ವೆಯನ್ನೇ ಕಳೆದುಕೊಳ್ಳುತ್ತಾಳೆ. 'ಒಮ್ಮೆ ನನ್ನಲ್ಲಿಯೂ ಯೌವನದ ಸುಗಂಧವಿತ್ತು. ಮೊದಲ ಮಳೆಯೊಡನೆ ಹೊಲಗಳಲ್ಲಿ ಮೆದುಮಣ್ಣಿನಿಂದ ಏಳುವ ನರುಗಂಪಿಗಾಗಿ ನಾನೂ ಹರಿದಾಡುತ್ತಿದ್ದೆ' (ಯಯಾತಿ, ಪು.ಸಂ 13) ಈ ಸಾಲುಗಳು ಯೌವನ ತುಂಬಿದ ಆಕೆಯ ಬದುಕಿನ ಬಗ್ಗೆ ಆಕೆಗಿದ್ದ ಕನಸುಗಳನ್ನು ಪ್ರತಿಬಿಂಬಿಸುತ್ತವೆ. ದೇವಯಾನಿಯ ದಾಸಿಯಾದ ಬಳಿಕ ಸಹನೆ ಕಳೆದುಕೊಂಡ ಶರ್ಮಿಷ್ಠೆ ಎಲ್ಲರನ್ನೂ ಮಾತಿನಿಂದ ಚುಚ್ಚಿ ಘಾಸಿಗೊಳಿಸುವುದು ಕಂಡುಬರುತ್ತದೆ. ಯಯಾತಿ ದೇವಯಾನಿಯನ್ನು ಮದುವೆಯಾದ ಕಾರಣವನ್ನು ಬಲ್ಲ ಶರ್ಮಿಷ್ಠೆ ಸಮಯ ಸಿಕ್ಕಾಗಲೆಲ್ಲಾ ಅದನ್ನು ದೇವಯಾನಿಗೆ ನೆನಪಿಸುತ್ತಲೇ ಇರುತ್ತಾಳೆ. 'ಸಂಜೀವಿನಿ ಸಿಗುವುದಾದರೆ ನಿನ್ನನ್ನು ಸ್ವೀಕರಿಸಬಾರದೇಕೆ? ಅಕ್ಷಯ ಪುಷ್ಪದೊಡನೆ ಬಂದ ಹುಳದಂತೆ!' (ಯಯಾತಿ, ಪು.ಸಂ 8) ಎನ್ನುವ ಮಾತುಗಳು ಇದಕ್ಕೆ ಉದಾಹರಣೆಯಾಗಿದೆ.

ದೇವಯಾನಿಯ ಜೊತೆ ಬಂದ ಶರ್ಮಿಷ್ಠೆಯ ರೂಪ ಯಯಾತಿಯ ಮನಸ್ಸನ್ನು ಸೆಳೆಯುತ್ತದೆ. ತನ್ನ ಸಂಸಾರ ಭಾಗ್ಯವನ್ನೇ ಕಸಿದುಕೊಂಡ ದೇವಯಾನಿಯ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಶರ್ಮಿಷ್ಠೆ ಈ ಸಂದರ್ಭವನ್ನು ಬಳಸಿಕೊಳ್ಳುತ್ತಾಳೆ. ಯಯಾತಿಯನ್ನು ಸೇರುತ್ತಾಳೆ. ಮುಂದಾಗುವ ಪರಿಣಾಮದ ಅರಿವಿದ್ದ ಶರ್ಮಿಷ್ಠೆ ಯಯಾತಿ ಆಕೆಯನ್ನು ರಾಣಿಯಾಗಿಸುತ್ತೇನೆ ಎಂದಾಗ ನಿರಾಕರಿಸುತ್ತಾಳೆ. 'ನಿಮ್ಮ ಅಪ್ಪಣೆಗೆ ಹೆದರಲು ನಾನು ನಿಮ್ಮ ಪ್ರಜೆಯಲ್ಲ, ಇನ್ನುಮುಂದೆ ನಿಮ್ಮ ರಾಣಿವಾಸದ ದಾಸಿಯೂ ಅಲ್ಲ. ನಾನು ಸ್ತ್ರೀ ಬೇಕಾದದ್ದನ್ನು ಮಾಡಬಲ್ಲೆ' (ಯಯಾತಿ, ಪು.ಸಂ 22) ಎನ್ನುವ ಶರ್ಮಿಷ್ಠೆಯ ಮಾತುಗಳು ಪುರುಷ ಪ್ರಧಾನ ಸಮಾಜದ ಅಧಿಕಾರಶಾಹಿ ಮನೋಭಾವವನ್ನು ಆಕೆ ಮೀರಿ ನಿಂತದ್ದನ್ನು ಧ್ವನಿಸುತ್ತದೆ. ಯಯಾತಿಯು ತನ್ನ ವೃದ್ಧಾಪ್ಯವನ್ನು ಸ್ವೀಕರಿಸಲು ಸಾವಿರಾರು ಜನರು ಮುಂದೆ ಬರಬಹುದು ಎನ್ನುವ ಭ್ರಮೆಯಲ್ಲಿರುವಾಗ, 'ಏಕೆ ಬರಬೇಕು? ನಿಮ್ಮ ಕೃತ್ಯದ ಫಲವನ್ನು ಅವರೇಕೆ ಉಣ್ಣಬೇಕು? ಪಾಪ ಪುಣ್ಯಗಳೆಂದರೆ ಧನವೇ, ಕೊಟ್ಟುಕೊಂಡು ಮಾಡಲಿಕ್ಕೆ?' (ಯಯಾತಿ, ಪು.ಸಂ 41) ಎನ್ನುವ ಶರ್ಮಿಷ್ಠೆಯ ಮಾತುಗಳು ಆಕೆಯ ಪ್ರೌಢಿಮೆ ಹಾಗೂ ನೇರ ನುಡಿಗಳಿಗೆ ನಿದರ್ಶನವಾಗುತ್ತದೆ. ಶರ್ಮಿಷ್ಠೆಯ ವ್ಯಕ್ತಿತ್ವದಲ್ಲಿ ತ್ಯಾಗ ಮತ್ತು ಜವಾಬ್ದಾರಿಯ ಗುಣಗಳು ಪ್ರಮುಖವಾಗಿ ಕಾಣಿಸುತ್ತವೆ. ತನ್ನ ವೈಯಕ್ತಿಕ ನೋವನ್ನು ಮೀರಿ ಇತರರ ಬದುಕಿನ ಬಗ್ಗೆ ಕಾಳಜಿ ವಹಿಸುವ ಅವಳು ಕ್ರಮೇಣ ಪ್ರೌಢ ಮತ್ತು ಮಾನವೀಯ ವ್ಯಕ್ತಿತ್ವವಾಗಿ ಬೆಳೆಯುತ್ತಾಳೆ. ಶರ್ಮಿಷ್ಠೆಯ ಪಾತ್ರವು ತ್ಯಾಗ ಮತ್ತು ವಿಧೇಯತೆಯ ಸಾಂಪ್ರದಾಯಿಕ ಕಲ್ಪನೆಗಳ ನಡುವೆಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ.

**ಸ್ವರ್ಣಲತೆ:**

ಮೂಲದಲ್ಲಿಲ್ಲದೆ ಗಿರೀಶ್ ಕಾರ್ನಾಡರು ಚಿತ್ರಿಸಿದ ಎರಡು ಪಾತ್ರಗಳಲ್ಲಿ ಸ್ವರ್ಣಲತೆಯ ಪಾತ್ರವೂ ಒಂದು. ಸ್ವರ್ಣಲತೆ ದೇವಯಾನಿಯ ಆಪ್ತ ದಾಸಿ. ಕಷ್ಟಪಟ್ಟು ವಿದ್ಯಾಭ್ಯಾಸವನ್ನು ಪಡೆದ ಸ್ವರ್ಣಲತೆ ಯಯಾತಿ ಮಹಾರಾಜರ ಸಾರಥಿಯನ್ನು ಮದುವೆಯಾಗಿ ಅರಮನೆಗೆ

ಬರುತ್ತಾಳೆ. ವಿದ್ಯಾಭ್ಯಾಸ ಪಡೆಯಲು ದುಡ್ಡಿಲ್ಲದ ಸಂದರ್ಭದಲ್ಲಿ ಒಬ್ಬ ಬಡ ಬ್ರಾಹ್ಮಣನಿಗೆ ಅನ್ನ ಹಾಕಿ ಆತನಿಂದ ವಿದ್ಯೆ ಪಡೆಯುತ್ತಾಳೆ. ಮದುವೆಯ ಬಳಿಕ ಈ ವಿಚಾರ ಸ್ವರ್ಣಲತೆಯ ಪತಿಗೆ ತಿಳಿದು ಅವರ ಸಂಬಂಧ ಮುರಿದು ಬೀಳುತ್ತದೆ. ವಿದ್ಯಾರ್ಜನೆಗಾಗಿ ಬಡ ಬ್ರಾಹ್ಮಣನನ್ನು ಆಶ್ರಯಿಸಿದ್ದ ಸ್ವರ್ಣಲತೆ ಗಂಡನ ಸಂಶಯಕ್ಕೆ ಗುರಿಯಾಗಿ ತಾನು ಮಾಡದ ತಪ್ಪನ್ನು ತನ್ನ ಮೇಲೆಳೆಯುತ್ತಾಳೆ. ಹೀಗೆ ಆಕೆಯ ಹತ್ತು ವರ್ಷಗಳ ಸಂಸಾರ ಜೀವನ ಅಂತ್ಯವನ್ನು ಕಾಣುತ್ತದೆ.

ಮದುವೆಯಾದ ಹೊಸತರಲ್ಲೇ ಪುರು ತನ್ನ ಯೌವನವನ್ನು ತಂದೆಗೆ ಧಾರೆಯೆರೆದಾಗ ಈ ವಿಚಾರವನ್ನು ಚಿತ್ರಲೇಖೆಗೆ ತಿಳಿಸುವ ದೌರ್ಭಾಗ್ಯ ಸ್ವರ್ಣಲತೆಯದ್ದಾಗುತ್ತದೆ. ದುಃಖಿತಳಾದ ಚಿತ್ರಲೇಖೆಯನ್ನು ಸಂತೈಸಿ ಆಕೆಯ ಮನಸ್ಸನ್ನು ಗಟ್ಟಿಗೊಳಿಸುತ್ತಾಳೆ. ಏಕಾಂಗಿಯಾಗಿ ದುಃಖಿಸುತ್ತಿರುವ ಚಿತ್ರಲೇಖೆಗೆ ಸಾಂತ್ವನ ನೀಡುವ ಸ್ವರ್ಣಲತೆ ತನ್ನದೇ ಬದುಕಿನ ನೋವನ್ನು ಹಂಚಿಕೊಳ್ಳುವ ಮೂಲಕ ಅವಳ ಏಕಾಂತವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಾಳೆ. ತನ್ನ ಮೇಲೆ ನಡೆದ ಅನ್ಯಾಯ ಮತ್ತು ತನ್ನ ಅಸಹಾಯಕತೆಯ ಅನುಭವವನ್ನು ಹೇಳಿಕೊಳ್ಳುವ ಮೂಲಕ ಹೆಣ್ಣಿನ ಬದುಕಿನ ನೋವಿಗೆ ಧ್ವನಿಯಾಗುತ್ತಾಳೆ. ನಾಟಕದಲ್ಲಿ ಸ್ವರ್ಣಲತೆ ಸಾಮಾನ್ಯ ದಾಸಿಯ ಪಾತ್ರವನ್ನು ಮೀರಿ ಮಾನವೀಯತೆ, ಮಮತೆ ಮತ್ತು ಕಳಕಳಿಯ ಪ್ರತೀಕವಾಗಿ ರೂಪುಗೊಂಡಿದ್ದಾಳೆ.

**ಚಿತ್ರಲೇಖೆ:**

ನಾಟಕದಲ್ಲಿ ಬರುವ ಸ್ವರ್ಣಲತೆಯಂತೆಯೇ ಚಿತ್ರಲೇಖೆಯೂ ಕಾಲ್ಪನಿಕ ಪಾತ್ರ. ಅಂಗದೇಶದ ರಾಜಕುಮಾರಿಯಾದ ಚಿತ್ರಲೇಖೆ ವಂಶ ಪ್ರತಿಷ್ಠೆಯ ಕಾರಣದಿಂದ ಪುರುವನ್ನು ವಿವಾಹವಾಗುತ್ತಾಳೆ. ಹೀಗಾಗಿ ಅವಳ ವಿವಾಹದಲ್ಲಿ ಅವಳ ಸ್ವಾತಂತ್ರ್ಯಕ್ಕಿಂತ ಪುರುಷಪ್ರಧಾನ ವ್ಯವಸ್ಥೆಯ ಪ್ರಭಾವ ಹೆಚ್ಚಾಗಿ ಕಾಣಿಸುತ್ತದೆ. ದಾಸಿಯಾದ ಸ್ವರ್ಣಲತೆಯನ್ನು 'ಸ್ವರೂ' ಎಂದು ಪ್ರೀತಿಯಿಂದ ಕರೆಯುವ ಚಿತ್ರಲೇಖೆಯಲ್ಲಿ ತಾನು ರಾಣಿ ಎನ್ನುವ ಯಾವುದೇ ಅಹಂ ತೋರಿಬರುವುದಿಲ್ಲ. ಪುರುವನ್ನು ಮದುವೆಯಾಗಿ ಅರಮನೆಗೆ ಬಂದಾಗ ಅತ್ತೆಯಾದ ದೇವಯಾನಿ ಅರಮನೆಯನ್ನು ತೊರೆದಿರುತ್ತಾಳೆ. ಈ ನೋವನ್ನು ಸ್ವರ್ಣಲತೆ ಹಂಚಿಕೊಂಡಾಗ ಚಂದ್ರವಂಶದ ದುಃಖ ನನ್ನ ದುಃಖವೂ ಹೌದು ಎನ್ನುವ ಚಿತ್ರಲೇಖೆಯಲ್ಲಿ ಅರಮನೆಗೆ ಬಂದ ದಿನವೇ ಅರಮನೆಯ ಸುಖ–ದುಃಖಗಳನ್ನು ತನ್ನ ಬದುಕಿನ ಭಾಗವೆಂದು ಸ್ವೀಕರಿಸುವ ಪ್ರಬುದ್ಧ ಮನಸ್ಥಿತಿಯನ್ನು ಕಾಣಬಹುದು.

ಪುರು ದುರ್ಬಲ, ಹೇಡಿ ಎಂದು ಭಾವಿಸುವ ಚಿತ್ರಲೇಖೆ ಅವನು ತನ್ನ ತಂದೆ ಯಯಾತಿಗಾಗಿ ವೃದ್ಧಾಪ್ಯವನ್ನು ಸ್ವೀಕರಿಸಿದ್ದಾನೆ ಎಂದು ತಿಳಿದಾಗ ಅವನ ಬಗ್ಗೆ ಗೌರವ ಮತ್ತು ಹೆಮ್ಮೆ ಬೆಳೆಸಿಕೊಳ್ಳುತ್ತಾಳೆ. ವೃದ್ಧನಾದ ಪುರುವನ್ನು ಪ್ರತ್ಯಕ್ಷವಾಗಿ ಕಂಡಾಗ ಆಕೆ ಭಯಪಡುತ್ತಾಳೆ. ಪತಿಯ ಮೇಲಿನ ಪ್ರೀತಿ, ವೈವಾಹಿಕ ಜೀವನದ ಕನಸು ವಾಸ್ತವಿಕತೆಯ ಜೊತೆಗೆ ತೀವ್ರ ಸಂಘರ್ಷಕ್ಕೊಳಪಡುತ್ತದೆ. ಅವಳು ಯಯಾತಿಯ ನಿರ್ಧಾರಗಳನ್ನು ಪ್ರಶ್ನಿಸುವ ಮೂಲಕ ಸಾಂಪ್ರದಾಯಿಕ ಮೌಲ್ಯಗಳನ್ನೂ, ತಂದೆ–ಮಗನ ಸಂಬಂಧದ ಹೆಸರಿನಲ್ಲಿ ನಡೆಯುವ ತ್ಯಾಗದ ಕಲ್ಪನೆಯನ್ನೂ ಪ್ರಶ್ನಿಸುತ್ತಾಳೆ. ಪುರುವಿನ ತ್ಯಾಗ ನಿಜವಾಗಿಯೂ ಕರ್ತವ್ಯವೇ ಅಥವಾ ತಂದೆಯ ಸ್ವಾರ್ಥವನ್ನು ಪೂರೈಸುವ ಒಂದು ಅನ್ಯಾಯವೇ ಎಂಬ ಪ್ರಶ್ನೆಯನ್ನು ಚಿತ್ರಲೇಖೆಯ ಮೂಲಕ ನಾಟಕ ಮುಂದಿಡುತ್ತದೆ. ಯಯಾತಿಯಲ್ಲಿ ತನ್ನ ಪತಿ ಪುರುವಿನ ಯೌವನವನ್ನು ಕಾಣುವ ಚಿತ್ರಲೇಖೆ ತನ್ನ

ದಾಂಪತ್ಯವನ್ನು ಪುನಃ ಪಡೆಯುವ ದೃಷ್ಟಿಯಿಂದ ಅವನತ್ತ ಆಕರ್ಷಿತಳಾಗುತ್ತಾಳೆ. ಆದರೆ ಈ ಆಕರ್ಷಣೆ ದಾಂಪತ್ಯ ನಿಷ್ಠೆಯ ಮಿತಿಯನ್ನು ದಾಟುವುದರಿಂದ ಸಂಬಂಧಗಳಿಗೆ ಅರ್ಥವಿಲ್ಲದಾಗಿಸಿ ನೈತಿಕವಾಗಿ ಪ್ರಶ್ನಾರ್ಹವಾಗುತ್ತದೆ. ಹಾಗೆಯೇ ಸ್ತ್ರೀಯ ಅಸ್ತಿತ್ವ ಸಂತಾನೋತ್ಪತ್ತಿಗೆ ಮಾತ್ರ ಸೀಮಿತವೇ ಎನ್ನುವ ಪ್ರಶ್ನೆಯೂ ಉದ್ಭವಿಸುತ್ತದೆ.

ನಾಟಕದ ಕೊನೆಯಲ್ಲಿ ವಿಷಪಾನ ಮಾಡುವ ಚಿತ್ರಲೇಖೆ ಆತ್ಮಹತ್ಯೆಯನ್ನು ವೈಯಕ್ತಿಕ ದೌರ್ಬಲ್ಯವನ್ನಾಗಿ ಉಳಿಸದೆ ಪುರುಷಪ್ರಧಾನ ಅಧಿಕಾರ ವ್ಯವಸ್ಥೆಯ ವಿರುದ್ಧದ ತೀವ್ರ ಪ್ರತಿಭಟನೆಯನ್ನಾಗಿ ರೂಪಿಸುತ್ತಾಳೆ. ಚಿತ್ರಲೇಖೆಯ ಪ್ರಶ್ನೆಗಳು ನಾಟಕದ ಕಥೆಯನ್ನು ಕೇವಲ ಪೌರಾಣಿಕ ಘಟನೆಗಳ ಮಟ್ಟದಲ್ಲಿ ಉಳಿಸದೆ, ಮಾನವೀಯ ಮತ್ತು ಸಾಮಾಜಿಕ ಚಿಂತನೆಯ ಮಟ್ಟಕ್ಕೆ ಕೊಂಡೊಯ್ಯುತ್ತವೆ.

**ಉಪಸಂಹಾರ:**

ಕಾರ್ನಾಡರ 'ಯಯಾತಿ' ನಾಟಕದಲ್ಲಿ ಸ್ತ್ರೀ ಬದುಕಿನ ಅಂತರಂಗದ ಸಂಕೀರ್ಣತೆಗಳನ್ನು ಆಧುನಿಕ ಸಂವೇದನೆಯೊಂದಿಗೆ ಚಿತ್ರಿಸಿರುವುದು ಸ್ಪಷ್ಟವಾಗುತ್ತದೆ. ದೇವಯಾನಿ, ಶರ್ಮಿಷ್ಠೆ, ಸ್ವರ್ಣಲತೆ, ಚಿತ್ರಲೇಖೆ ವಿಭಿನ್ನ ವ್ಯಕ್ತಿತ್ವಗಳ ಪ್ರತಿನಿಧಿಗಳಾಗಿದ್ದು, ಅವರ ಮೂಲಕ ಪ್ರೀತಿ, ಸ್ವಾಭಿಮಾನ, ತ್ಯಾಗ, ಅಸೂಯೆ, ನೋವು, ಅಸಹಾಯಕತೆ ಹಾಗೂ ಪ್ರತಿರೋಧದ ವಿವಿಧ ನೆಲೆಗಳು ಅನಾವರಣಗೊಳ್ಳುತ್ತವೆ.

ಪೌರಾಣಿಕ ಚೌಕಟ್ಟಿನೊಳಗೆ ಸ್ತ್ರೀ ಬದುಕಿನ ಅಸಹಾಯಕತೆ ಮಾತ್ರವಲ್ಲದೆ, ಆಕೆಯ ಆತ್ಮಗೌರವ, ಪ್ರತಿರೋಧ ಮತ್ತು ಸ್ವತಂತ್ರ ಅಸ್ತಿತ್ವದ ಹುಡುಕಾಟವೂ ನಾಟಕದಲ್ಲಿ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಪೌರಾಣಿಕ ನೆಲೆಯಲ್ಲಿ ಸ್ತ್ರೀಯರ ಬದುಕು, ಅವರ ಆಯ್ಕೆಗಳು, ಅಂತರಂಗದ ಸಂಘರ್ಷಗಳು ಮತ್ತು ಅಸ್ತಿತ್ವದ ಪ್ರಶ್ನೆಗಳನ್ನು ಮುಂದಿಡುವ ಮೂಲಕ ಕಾರ್ನಾಡರು ಸ್ತ್ರೀ ಪಾತ್ರಗಳಿಗೆ ವಿಶಿಷ್ಟ ಆಯಾಮವನ್ನು ನೀಡಿದ್ದಾರೆ. ಈ ಕಾರಣದಿಂದ 'ಯಯಾತಿ'ಯ ಸ್ತ್ರೀ ಪಾತ್ರಗಳು ಸಮಕಾಲೀನ ಸಮಾಜದಲ್ಲಿಯೂ ಪ್ರಸ್ತುತವಾಗುವಂತಹ ಸ್ತ್ರೀ ಪ್ರಜ್ಞೆ, ಆತ್ಮಗೌರವ ಮತ್ತು ಸ್ವತಂತ್ರ ಅಸ್ತಿತ್ವದ ಸಂಕೇತಗಳಾಗಿ ಕಾಣಿಸಿಕೊಳ್ಳುತ್ತವೆ.

**ಪರಾಮರ್ಶನ ಗ್ರಂಥಗಳು:**

1. ಗಿರೀಶ್ ಕಾರ್ನಾಡ್, (2015), ಯಯಾತಿ, ಧಾರವಾಡ: ಮನೋಹರ ಗ್ರಂಥ ಮಾಲಾ.
2. ಮಮತಾ ರಾವ್, (2006), ಗಿರೀಶ್ ಕಾರ್ನಾಡರ ನಾಟಕಗಳಲ್ಲಿ ಸ್ತ್ರೀ, ಮುಂಬೈ: ಅಭಿಜಿತ್ ಪ್ರಕಾಶನ.
3. ಶ್ರೀನಿವಾಸ ಮೂರ್ತಿ ಕಾ. ವೆಂ. , (2005), ಕನ್ನಡ ರಂಗಭೂಮಿ, ಬೆಂಗಳೂರು: ಸುಮುಖ ಪ್ರಕಾಶನ.
4. ಶಾಮರಾಯ ತ. ಸು. , (1962), ಕನ್ನಡ ನಾಟಕ, ಮೈಸೂರು: ಪ್ರತಿಭಾ ಪ್ರಕಾಶನ.
5. ಅಮೂರ ಜಿ. ಎಸ್., (2008), ಗಿರೀಶ್ ಕಾರ್ನಾಡ ಹಾಗೂ ಭಾರತೀಯ ರಂಗಭೂಮಿ, ಧಾರವಾಡ: ಮನೋಹರ ಗ್ರಂಥಮಾಲಾ.
6. ಗಣೇಶ ಅಮೀನಗಡ, (2004), ಪ್ರಯೋಗ ಪ್ರಸಂಗ, ಬೆಂಗಳೂರು: ಅರಿವು ಪ್ರಕಾಶನ.